# ಕುವೆಂಪು ಕವಿತೆಗಳಲ್ಲಿ ಸಂಧ್ಯಾ ಸೊಬಗು

**ಪ್ರತಿಮಾ ಕೆ. ಪಿ.**

ಸಹ ಪ್ರಾಧ್ಯಾಪಕರು, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪೇಟೆ.

**Received: 17-04-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672939**

**ABSTRACT:**

ಕವಿ ಎಂದರೆ ಕಲ್ಪನಾ ವಿಹಾರಿ. ಮನುಷ್ಯ ಭಾವನೆಗಳನ್ನು ವ್ಯಕ್ತಪಡಿಸುವ ಪರಿಯೇ ಕವಿತ್ವ. ಮನಸ್ಸು ಪ್ರಶಾಂತವಾಗಿ ಇರುವಲ್ಲಿ ಸಾಹಿತ್ಯ ಉತ್ತಮವಾಗಿ ಹೊರಹೊಮ್ಮುತ್ತದೆ. ನೈಸರ್ಗಿಕವಾಗಿ ಇರುವ ಪ್ರಕೃತಿಯ ಸೊಬಗನ್ನು ಆದಿಕವಿಗಳಿಂದ ಹಿಡಿದು ಇತ್ತೀಚಿನವರೆಗೆ ಬರಹಗಾರರು ವೈಭವದಿಂದ ಬಣ್ಣಿಸಿದ್ದಾರೆ. ಅದರಲ್ಲಿ ಕುವೆಂಪುರವರು ಪ್ರಮುಖರು. ಮಲೆನಾಡಿನಲ್ಲಿ ಹುಟ್ಟಿ ಬೆಳೆದ ರಸಋಷಿ ತಮ್ಮ ಸಾಹಿತ್ಯ ಚಟುವಟಿಕೆಗಳಲ್ಲಿ ಪ್ರಕೃತಿಯ ಚಿತ್ರಣವನ್ನು ಬಿಂಬಿಸಿದ್ದಾರೆ. ಮಲೆನಾಡಿನ ಗಿರಿಶಿಖರಗಳು, ಸಾಲು ಸಾಲು ಮರಗಳು, ಬೆಟ್ಟಗುಡ್ಡಗಳು, ಕವಿಶೈಲ, ಸಹ್ಯಾದ್ರಿಯ ತಪ್ಪಲು ಎಲ್ಲವೂ ಒಳಗೊಂಡಂತೆ ರಮಣೀಯ ನೋಟದ ಪರಿಸರವನ್ನು ಶ್ರೀಯುತರು ಕಾವ್ಯದಲ್ಲಿ ಹರಡಿದ್ದಾರೆ. 'ಸೂರ್ಯೋದಯ, ಚಂದ್ರೋದಯ ದೇವರ ದಯ ಕಾಣೋ' ಎಂದು ಹೇಳುತ್ತಾ, ಸೂರ್ಯೋದಯದ ಜೊತೆಗೆ, ಸೂರ್ಯಾಸ್ತದ ಸಂಜೆಯ ಸೊಬಗನ್ನು ವರ್ಣಿಸುತ್ತಾರೆ. ಕುವೆಂಪು ಅವರ ಕವನಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಸೌಂದರ್ಯ ಮತ್ತು ಚೈತನ್ಯ. ಪ್ರಕೃತಿಯ ಸೌಂದರ್ಯದಿಂದ ಆನಂದ ಮತ್ತು ಚೈತನ್ಯದಿಂದ ಶಕ್ತಿ ದೊರಕುತ್ತದೆ ಎಂಬುದು ಕವಿಯ ನಂಬಿಕೆ.

**KEYWORDS:**

ಕವಿ, ಕುವೆಂಪು, ಪ್ರಕೃತಿ, ಮಲೆನಾಡು, ಸೌಂದರ್ಯ.

ಪ್ರಕೃತಿಯ ಪರಮ ಸಾನಿಧ್ಯದಲ್ಲಿ ಜೀವನದ ನಿಜ ಸಾರ್ಥಕ್ಯವನ್ನು ಕಂಡುಕೊಂಡ ದಾರ್ಶನಿಕ ಕವಿ ಕುವೆಂಪು. ಮಲೆನಾಡಿನ ರುದ್ರರಮಣೀಯ ಸೌಂದರ್ಯಗಳನ್ನು ತಮ್ಮ ಎಲ್ಲಾ ಕೃತಿಗಳಲ್ಲಿ ಸಮೃದ್ಧವಾಗಿ ತುಂಬಿಕೊಟ್ಟ ಈ ಕವಿಗೆ ನಿಚ್ಚ ಪೊಸತಪ್ಪ ನಿಸರ್ಗ ದೇವಿಯ ಒಲವು ಸಂಪೂರ್ಣವಾಗಿ ದೊರೆತಿರುವುದು ಕವಿ ಪುಣ್ಯ ವಿಶೇಷವೇ ಆಗಿದೆ.

ಪ್ರಕೃತಿಯ ಸುಂದರ ಚಿತ್ರಗಳನ್ನು ತಮ್ಮ ಕಾವ್ಯದಲ್ಲಿ ವಿವಿಧ ನೆಲೆಗಳಲ್ಲಿ ಕಂಡು ಚಿತ್ರಿಸಿದ ಕವಿಗೆ ಸೂರ್ಯೋದಯದ ಚಿತ್ರಗಳೆಂದರೆ ಬಲು ಪ್ರೀತಿ. ಒಂದೊಂದು ತಾಣದಲ್ಲಿ ಒಂದೊಂದು ರೀತಿಯಲ್ಲಿ ಕಂಡ ಸೂರ್ಯೋದಯದ ಚಿತ್ರಗಳು ಸುಂದರ ಕವಿತೆಗಳಾಗಿ ಅರಳಿ ಓದುಗರ ಕಣ್ಣ ಕಾಂತಿಯನ್ನು ಹೆಚ್ಚಿಸಿವೆ. ತಮ್ಮ ಸ್ವನಿವಾಸಕ್ಕೆ 'ಉದಯರವಿ' ಎಂಬ ಹೆಸರನ್ನು ಇಟ್ಟಿರುವುದನ್ನು ಗಮನಿಸಿದರೆ ಕುವೆಂಪು ಅವರಿಗೆ ಸೂರ್ಯೋದಯ ಎಷ್ಟು ಪ್ರಿಯವಾಗಿತ್ತೆಂದು ನಾವು ಊಹಿಸಬಹುದು.

'ನವಿಲು ಕಲ್ಲಿನಲ್ಲಿ ಉಷಃಕಾಲ, ಫಾಲ್ಗುಣ ಸೂರ್ಯೋದಯ, ಇಂದ್ರ ದಿಗಂತದಿ, ಶರತ್ಕಾಲದ ಸೂರ್ಯೋದಯ, ಬಾ ಫಾಲ್ಗುಣ ರವಿ ದರ್ಶನಕೆ, ವೈಶಾಖ, ಸೂರ್ಯೋದಯ ಇತ್ಯಾದಿ ಸೂರ್ಯೋದಯ ಗೀತೆಗಳಲ್ಲಿ ಕವಿಯು ಕಂಡ ವಿನೂತನ ಕಾಣ್ಕೆಯನ್ನು ಕಂಡಿರಿಸಿರುವುದು ಕುವೆಂಪು ಅವರ ಪ್ರಕೃತಿ ಪ್ರೀತಿಯನ್ನು ತೋರಿಸುತ್ತದೆ. ಆದರೆ ಹಗಲಿಗೆ, ರವಿ ಕಾಂತಿಗೆ, ಉಷೆಯ ಸೊಬಗಿಗೆ ಮನ ತೆರದ ಈ ಕವಿಗೆ ಇರುಳು, ಮುಸ್ಸಂಜೆ, ನಿಶೆಯ ಚೆಲುವು ಅಷ್ಟಾಗಿ ಒಲಿದಂತೆ ಕಾಣುವುದಿಲ್ಲ ಎಂದುಕೊಂಡು ಅವರ ಇರುಳು, ಚಂದ್ರೋದಯ ಕುರಿತ ಕವಿತೆಗಳನ್ನು ಒಮ್ಮೆ ಅವಲೋಕಿಸಲು ಪ್ರಯತ್ನಿಸಿದಾಗ ಅಲ್ಲಿಯು ಕವಿ ಸಂಜೆಯ ಮೋಹಕ ಸೊಬಗನ್ನು ಗಾಢವಾದ ಕತ್ತಲ ಅನನ್ಯ ಚಿತ್ರಗಳನ್ನು ತಮ್ಮ ಕವಿತೆಗಳಲ್ಲಿ ವರ್ಣಮಯವಾಗಿ ಚಿತ್ರಿಸಿರುವುದು ಕವಿಯ ಅಪ್ರತಿಮ ಪ್ರತಿಭೆಗೆ ಸಾಕ್ಷಿಯಾಗಿದೆ.

ಬೈಗುಗೆಂಪು, ಮೋಹಿಸುವ ಸಂಜೆ, ಕುಕ್ಕನಹಳ್ಳಿಯ ಕೆರೆಯ ಮೇಲೆ, ಬೈಗಿನಲ್ಲಿ ಇತ್ಯಾದಿ ಕವಿತೆಗಳು ಸಂಧ್ಯಾ ಸೊಬಗನ್ನು ತುಂಬಾ ಸೊಗಸಾಗಿ ವರ್ಣಿಸುತ್ತವೆ.

'ನವಿಲು' ಕವನ ಸಂಕಲನದ 'ಬೈಗುಗೆಂಪು' ಕವಿತೆಯಲ್ಲಿ ಸಂಜೆಯಲ್ಲಿ ನೀಲಾಗಾಸದ ತುಂಬಾ ಹರಡಿದ ರಕ್ತಗೆಂಪುವರ್ಣ ಮಂಗಳವೂ, ಮನೋಹರವಾಗಿ ಕಂಡಂತೆ ಚೆಲುವೆಯ ಕೆನ್ನೆಯ ನಸುಗೆಂಪಿನಂತೆ ಹೊಳೆಯುತ್ತದೆ. ಹಾಗೆಯೇ ರಕ್ಕಸನ ಉದರವ ಬಗೆದು ರುದಿರವನೀಂಡಿದ ನರಹರಿಯ ಕೋಪದಲಿ ಕೆಂಪಾದ ಮೊಗದ ಬೈಗುಗೆಂಪು ಕಂಡಿದೆ.

**ಸುಂದರ ಮಂಗಳವೀ ಬೈಗು**
**ರುದ್ರ ಮನೋಹರವೀ ಬೈಗು**
**ನೆಚ್ಚಳಿದಳಿದಿಹ ಚೆಲುವೆಯರೆಲ್ಲರ**
**ಕೆನ್ನೆಗಳೆಳೆಗೆಂಪೀ ಬೈಗು;**
**ರಕ್ಕಸಸುರದಾರುರುಧಿರವನೀಂಟಿದ**
**ನರಹರಿ ಕೋಪವು ಈ ಬೈಗು!**

ಹಾಗೆಯೇ ಮೋಹಕ ಪ್ರೇಮದ ಮೂರುತಿ ಶ್ರೀಕೃಷ್ಣನ ಪ್ರೇಮದ ಸಂಕೇತವಾಗಿ ಸಂಜೆಯ ಕೆಂಪು ಕಂಡಂತೆ ಮುಂದೆ ಬರಲಿರುವ ಮಹಾ ಪ್ರಳಯದಲ್ಲಿ ಹರಿಯುವ ರಕ್ತದ ಬುಗ್ಗೆಯಾಗಿ ಬೈಗುಗೆಂಪು ಕಾಣುತ್ತಿದೆ ಕವಿಗೆ. ಬೈಗುಗೆಂಪು ಕವಿಯಲ್ಲಿ ಬಗೆ ಬಗೆಯ ಭಾವಗಳನ್ನು ಒಮ್ಮೆಲೆ ಉಂಟುಮಾಡಿದೆ. ಸರಳವಾಗಿ, ಮಧುರವಾಗಿ ಬೈಗುಗೆಂಪಿನ ಸೊಬಗನ್ನು ವರ್ಣಿಸುತ್ತವೆ. ರೌದ್ರರೂಪದ, ಪ್ರಳಯ ಕಾಲದ ಭೀಬತ್ಸತೆಯ ಸಂಕೇತವಾಗಿ ಸಂಜೆಯ ಕೆಂಪು ಕವಿಗೆ ಕಂಡಿದೆ.

'ಮೋಹಿಸುವ ಸಂಜೆ' ಎನ್ನುವ ಕವಿತೆಯಲ್ಲಿ ಕವಿ ತಮ್ಮನ್ನು ತಾವೇ ಅನಾವರಣ ಮಾಡಿಕೊಳ್ಳುತ್ತಿದ್ದಾರೆ. ಮಳೆಯು ಹೊಯ್ದು, ಹೊಳಪಾದ ಒಂದು ಸಂಜೆಯಲ್ಲಿ ಹೊಸ ಕಂಪೂ, ಹೊಸ ತಂಪೂ, ಹೊಸ ಪೆಂಪು, ತೋರುತ್ತಿದ್ದಾಗ ಕವಿಯ ಮನ ಬಯಲಿಗಾಶಿಸಿ ಹಾರುತ್ತಿದೆ. ತಂಗಾಳಿ ಬೀಸುತ್ತಿದೆ, ಕೋಗಿಲೆ ಕೂಗುತ್ತಿದೆ, ಕೆರೆಯ ಅಂಚಿನಲ್ಲಿ ಅಲೆಗಳು ತೂಗುತ್ತಿವೆ. ಇಂತಹ ಸುಂದರವಾದ ಸಂಜೆಯ ತಂಪಿನ ತಾಣದಲ್ಲಿ ಕವಿ ಭಾಗಿಯಾಗಲು

ಬಯಸುತ್ತಿದ್ದಾರೆ. ನಾಲ್ಕು ಗೋಡೆಗಳ ನಡುವಣ ಕೋಣೆಯಲ್ಲಿ ಪುಸ್ತಕ ಪ್ರಿಯನಾಗಿ ಕುಳಿತಿರುವುದು ಅವರಿಗೆ ಸಹನೆಯಾಗುವುದಿಲ್ಲ. "ಗೂಡು ಬಿಡು ಬಾ ಹೊರಗೆ ಗೀತೆಯಿರಲಿ' ಎಂದು ಪ್ರೀತಿಯಿಂದ ಕರೆಯುತ್ತಾರೆ.

**ಸೊಬಗಿನಲ್ಲಿ 'ಗೀತೆ'ಯನು**
**ಮೋಡಗಳ ಮರೆ ತಿಳಿವುದು**
**ಪಂಡಿತರ ಪಾಂಡಿತ್ಯ**
**ವೆಲ್ಲಮಂ ಬೋಧಿಪುದು**
**ಮೀರಿರುವುದು ;**
**ಸೊಬಗಿನಲಿ ಶಿವನೆಂದು**
**ಸಾರುತಿಹುದು.**
**ನಿರತೆಯಂಬುಧಿಯಲ್ಲಿ**
**ಮುಳುಗು ಬಾ ತೇಲು ಬಾ**
**ಕರಗು ಬಾ ಬಾ ನೋಡು**
**ಪರಮಾತ್ಮನಂ**
**ಬಾ ಹೊರಗೆ ಗೂಡು ಬಿಡು**
**ಬಾ ಬೇಗ ಬಾ**

ಸೊಬನಗ ಶಿವ, ಶಿವನ ಅಮೃತತ್ವ ಕಾಣಬೇಕೆಂದರೆ ಗೂಡು ಬಿಟ್ಟು ಹೊರಗೆ ಬರಬೇಕು. ಪ್ರಕೃತಿಯ ಗೂಡು ಬಿಟ್ಟು ಹೊರಗೆ ಬರಬೇಕು. ಪ್ರಕೃತಿಯ ಸುಂದರತೆಯಲ್ಲಿ ತೇಲುತ, ಮುಳುಗುತ್ತಾ ಆ ಪರಮಾತ್ಮನ ದಿವ್ಯತೆಯನು ಅನುಭವಿಸಬೇಕು.

'ಬೈಗಿನಲ್ಲಿ' ಎಂಬ ಮತ್ತೊಂದು ಕವಿತೆಯಲ್ಲಿ ಸಂಜೆಯನ್ನು ಬಂಚೆಗೆ ಹೋಲಿಸಿರಬಹುದು ಒಂದು ಬಗೆಯ ಕಲ್ಪನೆಯಾಗಿ ತೋರುತ್ತದೆ.

**...ಉರಿದುರಿದು ಸಂಚೆ**
**ಮೆಲ್ಲಮೆಲ್ಲನಾಯ್ತು ಬಂಚೆ**
**ಮುಗಿಲು ಮಾಗಿ, ಬಣ್ಣವೋಗಿ,**
**ಬೂದಿಯಾಗುತ್ತಿದ್ದಲಾಗಿ**
**ನಿಶಿಯ ಮಸಿಯ ಮುದ್ದೆ ಬಿತ್ತು**
**ಭುವನ ಕವನವಳಿಸಿದತ್ತು!**

ಮುಗಿಲ ಬಣ್ಣ ಮಾಸಿದಂತೆ ಬೂದಿಯ ಗುಡ್ಡೆಯಾಗಿ ನಿಶೆ ಮಸಿಯ ಮುದ್ದೆಯಾಗಿ ಬಿದ್ದಂತೆ ಕಾಣುತ್ತಿದೆ. ಭೂಮಿಯೊಂದು ಸುಂದರ ಕವನವಾಗಿ ಹಗಲಲ್ಲಿ ಹಲವು ಕಲ್ಪನೆಗಳ ಚಿತ್ರವಾಗಿ ಅರಳಿತ್ತು. ಈಗ ಅದು ಅಳಿಸಿ ಹೋದಂತೆ ಕಾಣುತ್ತಿದೆ. ಬಹುಷಃ ಬದುಕಿನ ಕೊನೆಯ ಘಟ್ಟದಲ್ಲಿ ಏನೂ ಉಳಿಯಲಾರದು. ಉರಿದು ಹೋದ ಮೇಲೆ ಬೂದಿ ರಾಶಿಯಂತೆ ಎಂಬಲ್ಲಿ ನಶ್ವರತೆಯೊಂದು ಬಯಲಾಗಿ ನಿಂತಂತೆ ಕಂಡಿದೆ ಕವಿಗೆ.

ಆದರೂ ಕವಿಗೆ ಭರವಸೆಗಳಿಗೆ, ಆಸೆ, ಕನಸುಗಳಿಗೆ ಕತ್ತಲೂ ಸಹ ಎಡೆ ಮಾಡಿಕೊಡುವುದು ಅವರ ಜೀವನೋತ್ಸಾಹದ ಪ್ರತೀಕವಾಗಿ ಕಾಣುತ್ತದೆ.

**ಆದರದೋ ಮೇಲೆ ನೋಡು!**
**ನೂರು ತಾರೆ, ಸಗ್ಗವೀಡು!**
**ಸಾವು ನನ್ನ ನಳಿಸಲಿಲ್ಲ**
**ತಾರೆಯಾಗಿ ಹೊಳೆವೆನಲ್ಲಿ!**

ಎಂಬಲ್ಲಿ ಕವಿಯ ಅದ್ಭುತ ಜೀವನ ಪ್ರೀತಿಯನ್ನು ಸೊಗಸಾಗಿ ಚಿತ್ರಿತಗೊಂಡಿದೆ.

'ಕುಕ್ಕನಹಳ್ಳಿಯ ಕೆರೆಯ ಮೇಲೆ' ಕಂಡೆ ಮುಸ್ಸಂಜೆಯ ಮನೋಹರ ಚಿತ್ರ ಭುವನ ಕವಿಯ ಭವ್ಯ ಮನದಿ ಮೂಡಿದ ಮಂತ್ರದಂತೆ ಕವಿಗೆ ಗೋಚರಿಸುತ್ತಿದೆ. ಎನಿತು ಬಾರಿ ಕುಳಿತು ಇಲ್ಲಿ ಮತ್ತೆ ಮತ್ತೆ ಅದೇ ದೃಶ್ಯವನ್ನು ನೋಡಿದರೂ ಬೇಸರವಿನಿತಿಲ್ಲ. ಪ್ರಕೃತಿ ಪ್ರೀತಿ ದಿನ ದಿನಕೆ ಬೆಳೆದು ಭಕ್ತಿಯಾಗಿದೆ, ಜಪವಾಗಿದೆ, ತಪವಾಗಿದೆ. ಕವಿಯ ಬಾಳಿನ ಹಳದಿ ಕೆಂಪು ಹಸುರಾಗಿದೆ ಎಂಬ ಚಿಂತನೆಯಲ್ಲಿ ಕವಿಯ ನಿತ್ಯ ನೂತನ ಭಾವಗಳಿಗೆ ಪ್ರಕೃತಿಯ ವಿಧ ವಿಧ ಬಣ್ಣದ ಚಿತ್ರಗಳೇ ಕಾರಣ ಎಂಬುದನ್ನು ದೃಢವಾಗಿ ಪ್ರತಿಪಾದಿಸುತ್ತವೆ.

**ಎನಿತು ಸಾರಿ ಕುಳಿತು ಇಲ್ಲಿ**
**ಇವನು ನೋಡಿಹೆ ;**
**ಎನಿತು ಸಾರಿ ಸೊಬಗಿನಲ್ಲಿ**
**ಪೂಜೆ ಮಾಡಿಹೆ ;**
**ದೃಶ್ಯವಲ್ಲವಿದೂ ವ್ಯಕ್ತಿ**
**ಭಾವವಾಗಿದೆ**
**...**
**ನನ್ನ ಕಣ್ಣೊಳಿರುವವೋಲೆ**
**ಕೆರೆಯ ಕಣ್ಣಲಿ**
**ತಾರೆ ಶಶಿಯ ಮೇಘಮಾಲೆ**
**ಜಡವಿದೆನ್ನಲಿ!**
**ಸರೋವರಕೂ ದೇವವಿದೆ!**
**ರಸಾವೇಶ ಭಾವವಿದೆ!**

ಕವಿಯಂತೆ ಪ್ರಕೃತಿಯ ರಸಾವೇಶ ಭಾವವಿದೆ ಎಂಬಲ್ಲಿ ಕವಿಯ ಮನಸಿಗೂ ಪ್ರಕೃತಿಯ ಮನಸಿಗೂ ಒಂದೇ ರೀತಿಯ ಭಾವಾವೇಶವಿದೆ ಎಂಬ ಅಭಿನ್ನತೆಯನ್ನು ಗುರುತಿಸುತ್ತಾರೆ.

'ಕಾಳರಾತ್ರಿ' ಎಂಬ ಸುನೀತದಲ್ಲಿ ಬಿರುಮಳೆಯು ಇರುಳನ್ನು ಕೊಚ್ಚುತ್ತಿರುವಾಗ ಕ್ರಾಂತಿ ಎಂಬ ಭೂತ ತಲೆಗೆದರಿ ಹುಚ್ಚೆದ್ದು ಕುಣಿಯುತ್ತದೆ. ಆದರೆ ಭೀಮಛಾಯೆ ನಮ್ಮನ್ನು ಬೆದರಿಸುತ್ತದೆ ಎಂಬ ಕಲ್ಪನೆ ಕತ್ತಲೆಯೆಂಬ ಹೆದರಿಕೆಯನ್ನು ಇನ್ನಷ್ಟು ವಿಸ್ತರಿಸುತ್ತದೆ.

'ಹೊಳೆಯುಕ್ಕಿ ಮನುಜರನು ಕೊಚ್ಚುತಿದೆ, ಬೆಚ್ಚುತಿದೆ ನರನೆದೆ ನೆಚ್ಚುಗೆಟ್ಟು ಎಲ್ಲೆಡೆಯು ಕೇಳುತಿದೆ ಹರಕಾರವು, ಕ್ರಾಂತಿ ಎಂಬವ ಭೂತು ತಲೆಗೆದರಿ ಹುಚ್ಚೆದ್ದು ಸುತ್ತುತಿದೆ ಭೀಮ ಛಾಯೆಯ ಚೆಲ್ಲಿ'.

**ಕತ್ತಲ ಭೀಮ ಛಾಯೆಯಿಂದ ಹೊರಬರುವ ಭರವಸೆ ಕವಿಗಿದೆ.**

**ಮನವೇ ನಿರಾಶೆಯಲಿ ಕೊರಗಿದರು' ಸಾಗರದ**
**ಮಥನದಲಿ ವಿಷಯವು ಜನಿಸಿದೆ ಇಂದು! ಮೂಡುವುದು**
**ಮುಂದೆ ಸೊದೆ! ಹಗಲು ಬರುವುದು ತೊಲಗಿ ಕಾಳರಾತ್ರಿ!**

ಕತ್ತಲು ಕಳೆದು ಹುಟ್ಟದೆ ಹಗಲು, ಸಮುದ್ರ ಮಥನದಲಿ ವಿಷ ಮೊದಲು ನಂತರ ಅಮೃತ ಉದಿಸಿದಂತೆ ಎಂಬ ಪೌರಾಣಿಕ ಕಲ್ಪನೆ ಸುಂದರವಾಗಿದೆ.

'ಮಿಣುಕು ಹುಳುಗಳು' ಎಂಬ ಕವಿತೆಯಲ್ಲಿ ಗಾಢ ಕತ್ತಲು ಧ್ಯಾನದ ಆನಂದವನ್ನು ಪಡೆಯಲು ಪ್ರಶಸ್ತವಾದ ಸಮಯ ಎಂಬುದನ್ನು ಸೂಚಿಸುತ್ತದೆ.

**ವಿಶ್ವವೇ ಗೂಢ ಸಮಾಧಿಯ ಸೇರಿ**
**ಇದ್ದಿತು ಧ್ಯಾನಾನಂದವ ತೋರಿ!**

ಚಂದ್ರೋದಯ, ಹುಣ್ಣಿಮೆಯ ಸುಂದರ ಬೆಳದಿಂಗಳು. ತಂಪು ಸುರಿಸುವ ಚಂದ್ರನ ಅಪೂರ್ವ ಚೆಲುವು ಕವಿಯನ್ನು ಮಗುವಂತೆ ಸೆಳೆಯುತ್ತದೆ. ಚಂದಮಾಮಗೆ, ಕೌಮುದಿ ಬೆಳ್ದಿಂಗಳು, ಅರ್ಧ ಚಂದ್ರ, ಮೂರ್ತಿಯ ಚಂದ್ರ, ತಿಂಗಳ ಮಾವ, ಹುಣ್ಣಿಮೆ ಇನ್ನೂ ಮುಂತಾದ ಕವಿತೆಗಳಲ್ಲಿ ಹಲವು ಸುಂದರ ಉಪಮೆ, ರೂಪಕಗಳ ರಮ್ಯ ಚಿತ್ರಗಳನ್ನು ನೋಡಬಹುದು.

'ಅರ್ಧ ಚಂದ್ರ' ಕವಿತೆಯಲ್ಲಿ ಮಗು ಕಂಡಂತೆ ಚಂದ್ರ ಬಹು ಸುಂದರವಾಗಿ ವರ್ಣಿತಗೊಂಡಿದ್ದಾನೆ.

**ದೇವರ ಪೆಪ್ಪರಮೆಂಟೇ ನಮ್ಮ**
**ಗಗನದೊಳಲೆಯುವ ಚಂದಿರನು**
**ಎಷ್ಟು ತಿಂದರೂ ಖರ್ಚೇ ಆಗದ**
**ಬೆಳೆಯುವ ಪೆಪ್ಪರಮೆಂಟಮ್ಮ!**
**'ಕೌಮದಿ' ಎಂಬ ಕವಿತೆಯಲ್ಲಿ**
**ಮೂಡುತಿಹನು ಚಂದಿರಂ**
**ಚೆಲುವಿನಿಂದರಂ;**
**ಪೂರ್ವ ನೀಲನಭವ ಬೆಳಗಿ**
**ಬಿಹನು ಸೊಬಗ ಮಂದಿರಂ**

ಸರಳ ಸುಂದರ ವರ್ಣನೆಗಳಿವು. ಎಳೆಯ ಕಂದನ ನಗುವಿನಂತೆ, ಗಗನ ರಮಣಿಯ ಹಣೆಯ ಬೊಟ್ಟಿನಂತೆ. ಹೊಚ್ಚ ಹೊಸ ಚೆಂಡಿನಂತೆ ತುಂಬು ಚಂದಿರನ ಚೆಲುವು ಎಂಬ ಬಗೆ ಬಗೆಯ ಕಲ್ಪನೆಗಳು ಅರಳಿದಂತೆ:

**ಬಗೆಯ ಕೇರಿನಲ್ಲಿ ಹಳೆಯ**
**ಕನಸುಗಳಿದು ಸುಳಿಸಿ, ನಲಿಸಿ;**
**ಬಾಳನೆಲ್ಲ ಕನಸು ಮಾಡಿ.**
**ತಾನೆ ಕನಸಿಗೊಡವೆಯಾಗಿ...**

ಮೆಲ್ಲನೆ ಕನಸುಗಳ ತೇರನೇರುವಂತೆ ಮಾಡುತ್ತದೆ ಚಂದ್ರಿಕೆಯ ಚೆಲುವು. ಮತ್ತೆ,

**ಶಿವನೇ ಚಂದಿರನೆಂದದಿ ತೋರುತ**
**ಬಂದನು ಬಾನೆದೆಗೆ**
**...**
**ಸೌಂದರ್ಯದಿ ಶಿವ ಮೈದೋರಿಹನೈ**
**ಬಾ ಆರಾಧನೆಗೆ**

ಬೆಳದಿಂಗಳ ರಾತ್ರಿಯೂ ಕವಿಗೆ ಶಿವನ ಸಾಕ್ಷಾತ್ಕಾರದ ನೆಲೆಯಾಗಿಯೇ ಕಾಣುತ್ತದೆ. ಇರುಳು, ಚಂದ್ರಿಕೆಯ ಸೊಬಗು ಮತ್ತೆ ಪರಮಾತ್ಮನ ಶಾಂತಿಯ ರೂಪವಾಗಿಯೇ ಕಾಣುತ್ತದೆ.

**ಓ ರಾತ್ರಿಯೇ, ಸಹ್ಯಾದ್ರಿಯೇ ;**
**ಹುಣ್ಣಿಮೆ, ಶಶಿಕಾಂತಿ ;**
**ನಿಮ್ಮೆಲ್ಲರ ಸಾನಿಧ್ಯವೆ**
**ಪರಮಾತ್ಮನ ಶಾಂತಿ!**

ಒಟ್ಟಾರೆ ಕುವೆಂಪು ಅವರ ಕತ್ತಲ ಕುರಿತ ಕವಿತೆಗಳಲ್ಲಿ ಕೆಲವು ವಿಶಿಷ್ಟ ಕಲ್ಪನೆಗಳು, ಮಗುವಂತೆ ಮೋಹಿಸುವ ಬೆಳದಿಂಗಳು, 'ಇದು ಹೊತ್ತು ಧ್ಯಾನಕೆ ಏಳೈ ಪ್ರಿಯಬಂಧು' ಎನ್ನುತ್ತಾ ಮತ್ತೆ ಮತ್ತೆ ಪ್ರಕೃತಿಯ ಸನ್ನಿಧಿಯಲ್ಲಿ ಪರಮಾತ್ಮನ ಕಾಣ್ಕೆಯನ್ನು ಕಂಡರಿಸಲು ತವಕಿಸುವುದು ಕಾಣುತ್ತದೆ. ಶಿವನೇ ಚೊನ್ನವಾಗಿ, ತಾವೇ ಅದರೊಳಗೆ ಲಯವಾಗಿ ಆನುಭಾವಿಕ ನೆಲೆಯನ್ನು ತಲುಪಲು ಸದಾ ತುಡಿಯುವಂತೆ ಕಾಣುತ್ತದೆ. ಈ ಕವಿತೆಗಳಲ್ಲೂ ಆ ಮನೋಭಾವವೇ ಕಾಣುತ್ತದೆ.

## ಪರಾಮರ್ಶನ ಗ್ರಂಥಗಳು:


1. ಕುವೆಂಪು. ಶಿವಾರೆಡ್ಡಿ ಕೆ. ಸಿ. (2020). ಕುವೆಂಪು ಸಮಗ್ರ ಕಾವ್ಯ ಸಂಪುಟ: ಭಾಗ–1. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ.
2. ಕುವೆಂಪು. ಶಿವಾರೆಡ್ಡಿ ಕೆ. ಸಿ. (2020). ಕುವೆಂಪು ಸಮಗ್ರ ಕಾವ್ಯ ಸಂಪುಟ: ಭಾಗ-2. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ.
3. ಪ್ರಧಾನ ಗುರುದತ್ತ. (2018). ಕುವೆಂಪು ಸಾಹಿತ್ಯ ಕೆಲವು ಅಧ್ಯಯನಗಳು. ಸಪ್ನ ಬುಕ್ ಹೌಸ್. ಬೆಂಗಳೂರು.
4. ಭಂಡಾರಿ ಆರ್. ವಿ. (2011). ಕುವೆಂಪು: ದೃಷ್ಟಿ-ಸೃಷ್ಟಿ. ಸುಮುಖ ಪ್ರಕಾಶನ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.